ಏಕೆಂದರೆ, ಮನೋಭಾವವೆಂಬುದು ಮೇಲ್ನೋಟಕ್ಕೆ ಗೋಚರಿಸುವುದಿಲ್ಲ. ಆದರೂ ಅದು ಪ್ರಬಲ. ಏಕೆಂದರೆ, ಇದು ಪರಿಣಾಮ ಬೀರದಿರುವುದಿಲ್ಲ!

"ಶಿಕ್ಷಕನು ತಾನು ಕಲಿಸುತ್ತಿದ್ದೇನೆ ಎಂದು ತಿಳಿದರೆ ಅವನು ಎಲ್ಲವನ್ನೂ ಕೆಡಿಸುತ್ತಿದ್ದಾನೆಂದೇ ಅರ್ಥ. ಏಕೆಂದರೆ ಎಲ್ಲ ಜ್ಞಾನವೂ ಅದಾಗಲೇ ಮನುಷ್ಯನೊಳಗೇ ಇದೆ. ಅದನ್ನು ಜಾಗೃತಗೊಳಿಸಬೇಕಾಗಿದೆ, ಅಷ್ಟೇ. ಆ ಜಾಗೃತಿಯನ್ನು ಉಂಟುಮಾಡುವುದಷ್ಟೇ ಅಧ್ಯಾಪಕನ ಕಾರ್ಯ. ಬಾಲಕರು ಸ್ವಬುದ್ಧಿ ಉಪಯೋಗಿಸಿ ತಮ್ಮ ಕಣ್ಣು, ಕಿವಿ, ಕೈಕಾಲುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದನ್ನು ತಾವೇ ಕಲಿಯಲಿ. ಅದಕ್ಕೆ ಅಣಿ ಮಾಡಿಕೊಡುವುದಷ್ಟೆ ನಮ್ಮ ಕಾರ್ಯ" ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ನಿಜಕ್ಕೂ ಶಿಕ್ಷಣ ಎಂಬುದನ್ನು ಹೊರಗಿನಿಂದ ಯಾರೂ ನೀಡಲು ಸಾಧ್ಯವಿಲ್ಲ. ಆದರೆ ಮನುಷ್ಯ ಮನಸ್ಸು ಮಾಡಿದರೆ ಶಿಕ್ಷಣ ಪಡೆದುಕೊಳ್ಳಬಲ್ಲ. ಈ ಕಲಿಕೆಯ ವಿಷಯವೇ ಹಾಗೆ. ಹೊರಗಿನಿಂದ ಯಾರೂ ತುರುಕಲು ಸಾಧ್ಯವಿಲ್ಲ; ಆದರೆ ಕಲಿಯುವ ಮನಸ್ಸಿದ್ದರೆ ಕಲಿಸುವವರಿಲ್ಲದಿದ್ದರೂ ಅದನ್ನು ಮನುಷ್ಯ ಕಲಿತುಕೊಳ್ಳುತ್ತಾನೆ.

ಈ ಕುರಿತು ಸ್ವಾಮಿ ವಿವೇಕಾನಂದರು ಹೇಳಿರುವ ಮಾತುಗಳು ತುಂಬ ಬೋಧಪ್ರದವಾಗಿವೆ. ಅವರೆನ್ನುತ್ತಾರೆ, "ನಾವು ಪ್ರತಿಯೊಬ್ಬರೂ ನಮಗೆ ನಾವೇ ಶಿಕ್ಷಣ ಕೊಟ್ಟುಕೊಳ್ಳಬೇಕು. ಎಂದೂ ಯಾರೂ ಇನ್ನೊಬ್ಬರಿಂದ ಶಿಕ್ಷಣ ಪಡೆದಿದ್ದು ಎಂಬುದು ಇಲ್ಲವೇ ಇಲ್ಲ. ಹೊರಗಣ ಶಿಕ್ಷಕರು, ಅಧ್ಯಾಪಕರು ಏನಿದ್ದರೂ ಸಲಹೆ – ಸೂಚನೆ ಕೊಡಬಹುದು, ಅಷ್ಟೆ. ಆ ಸಲಹೆಯು ಅಂತರಂಗದಲ್ಲಿರುವ ಗುರುಶಕ್ತಿಯನ್ನು ತಟ್ಟಿ ಎಬ್ಬಿಸಿ, ನಾವು ವಿಷಯಗಳನ್ನು ಅರಿತುಕೊಳ್ಳುವಂತೆ ಮಾಡುತ್ತದೆ. ಆಗ ನಮ್ಮೊಳಗೇ ಇರುವ ಗ್ರಹಣಶಕ್ತಿ, ಆಲೋಚನಾಶಕ್ತಿಗಳ ಮೂಲಕ ನಮಗೆ ವಿಷಯಗಳು ಸ್ಪಷ್ಟವಾಗುತ್ತವೆ ಮತ್ತು ನಮ್ಮ ಅಂತರಂಗದಲ್ಲೇ ಆ ಅರಿವು ಮೂಡುತ್ತದೆ."

ಈ ನುಡಿಗಳನ್ನು ಶಿಕ್ಷಕರು, ಅಧ್ಯಾಪಕರು ಹೃದ್ಗತ ಮಾಡಿಕೊಂಡು ನಮ್ರತೆಯನ್ನೂ, ನೈಜ ವಿನಯವನ್ನೂ ರೂಢಿಸಿಕೊಳ್ಳಬೇಕು. ಆಗ ಅವರ ಅರಿವಿನ ಹರಹು ಹೆಚ್ಚಲು ದಾರಿಯಾಗುವುದಲ್ಲದೇ, ಶಿಕ್ಷಕ–ವಿದ್ಯಾರ್ಥಿ ಸಂಬಂಧವೂ ಮಧುರವಾಗುತ್ತದೆ! ಅಧ್ಯಾಪಕರು ಎಷ್ಟೇ ನಿಷ್ಣಾತರಾದರೂ ಕಿರಿಯರಿಂದ ಕಲಿಯುವಂಥದ್ದೂ ಸಾಕಷ್ಟಿರುತ್ತದೆಯಲ್ಲವೇ? ಈ ದೃಷ್ಟಿಕೋನದಿಂದ ನೋಡಿದಾಗ, ಒಂದೊಂದು ವಿದ್ಯಾಸಂಸ್ಥೆಯೂ ಜ್ಞಾನಸಂಗಮವೇ ಸರಿ. ಕಲಿಸುವವರು – ಕಲಿಯುವವರಿಬ್ಬರೂ ಕಲೆತು ಹೆಚ್ಚಿನದನ್ನು ಕಲಿಯುತ್ತಾ ಪರಿಪೂರ್ಣರಾಗುವುದೇ ಶಿಕ್ಷಣದ ಸೂಕ್ತ ಪ್ರಣಾಳಿ. ಆದ್ದರಿಂದಲೇ ವೇದಕಾಲದಲ್ಲಿ ಗುರು – ಶಿಷ್ಯರಿಬ್ಬರೂ ಕೂಡಿಯೇ ಪ್ರಾರ್ಥಿಸುತ್ತಿದ್ದರು. ಈ ಪ್ರಾರ್ಥನೆಯೇ **'ಸಹನಾ ಭವತು'** ಎಂಬ ಪ್ರಸಿದ್ಧ ಮಂತ್ರದಲ್ಲಿ ಮೂಡಿಬಂದಿದೆ. ಈ ಮಂತ್ರದಲ್ಲಿ **ಸಹವೀರ್ಯಂ ಕರವಾವಹೈ । ತೇಜಸ್ವಿನಾವಧೀತಮಸ್ತು......** ಎಂಬ ಸಾಲುಗಳಿವೆಯಲ್ಲ, ಅವುಗಳ ಅರ್ಥವೇನು ಗೊತ್ತೇ? "ನಾವಿಬ್ಬರೂ ಒಟ್ಟಿಗೆ ಸಾಮರ್ಥ್ಯಶಾಲಿಗಳಾಗುವಂತಾಗಲಿ, ನಮ್ಮಿಬ್ಬರ ಅಧ್ಯಯನವು ತೇಜಸ್ವಿಯಾಗಲಿ, ಅಂದರೆ ನಾವು ಕಲಿತದ್ದೆಲ್ಲ ನಮ್ಮ ವ್ಯಕ್ತಿತ್ವದಲ್ಲಿ ಶಕ್ತಿ ತೇಜಸ್ಸುಗಳಾಗಿ ಹೊಮ್ಮಲಿ" ಎಂದು. ಇವಿಷ್ಟು ಶಿಕ್ಷಕರಲ್ಲಿ ಇರಬೇಕಾದ ಮನೋಭಾವಕ್ಕೆ ಸಂಬಂಧಿಸಿದ ವಿಷಯ.

ನಿಜಕ್ಕೂ, ವಿದ್ಯೆಯನ್ನು ಗಳಿಸುವುದು ಒಂದು ಬಗೆಯ ತಪಸ್ಸಾದರೆ, ಅದನ್ನು ಕಲಿಸುವುದು ಮತ್ತೊಂದು ಬಗೆಯ ತಪಸ್ಸು. "ಈ ಸ್ವಾಧ್ಯಾಯ – ಪ್ರವಚನಗಳೇ ಮಹಾತಪಸ್ಸು. ಅವುಗಳ ವಿಷಯದಲ್ಲಿ ಅಸಡ್ಡೆ ಮಾಡಬಾರದು" ಎನ್ನುತ್ತದೆ ತೈತ್ತಿರೀಯ ಉಪನಿಷತ್ತು.

ಅಲ್ಲದೆ, ಋಷಿ–ಮುನಿಗಳು **ಅಧ್ಯಾಪನಂ ಬ್ರಹ್ಮಯಜ್ಞಂ** – 'ಶಿಕ್ಷಣವು ಬ್ರಹ್ಮಯಜ್ಞ' ಎಂದು ಕರೆದಿರುವುದನ್ನು ಅಧ್ಯಾಪಕರು ಸದಾ ನೆನಪಿನಲ್ಲಿ ಇಟ್ಟಿರಬೇಕು. ಅಂದರೆ, ಯಜ್ಞವನ್ನು ಕೈಗೊಂಡವರು ಶಿಸ್ತು – ಸಂಯಮ – ಸದಾಚಾರಗಳಿಂದ ಕೂಡಿರಬೇಕು ಎಂಬುದು ಇದರ ಅಂತರಾರ್ಥ. ತಾವು ಕರಗತ ಮಾಡಿಕೊಂಡ ವಿಷಯವನ್ನು ಚ್ಯುತಿ ಇಲ್ಲದಂತೆ, ಒಲುಮೆ ತಾಳ್ಮೆಗಳಿಂದ ವಿದ್ಯಾರ್ಥಿಗಳಿಗೆ ಕಲಿಸುವುದೇ ಶಿಕ್ಷಕ ಮಾಡಬೇಕಾದ ಯಜ್ಞ – ಬ್ರಹ್ಮಯಜ್ಞ! ಇದರೊಂದಿಗೆ ಅವರು, ಅಧ್ಯಯನವೂ ಒಂದು ಮಹಾತಪಸ್ಸು ಎಂಬ ತಥ್ಯವನ್ನು ವಿದ್ಯಾರ್ಥಿಗಳಿಗೆ ಮನಗಾಣಿಸಬೇಕು. ಹೀಗೆ ಅಧ್ಯಯನ ಅಧ್ಯಾಪನಗಳನ್ನು ತಪಸ್ಸಿನಂತೆ, ಯಜ್ಞದೃಷ್ಟಿಯಿಂದ ಮಾಡಲು ತೊಡಗಿದರೆ ಶೈಕ್ಷಣಿಕ ಕ್ಷೇತ್ರದಲ್ಲಿ ಹೆಡೆಯಾಡುತ್ತಿರುವ ಸಕಲ ಸಮಸ್ಯೆಗಳೂ ತೊಲಗವೇನು?

ಕಡೆಯದಾದ, ಆದರೆ ಅತಿ ಮುಖ್ಯವಾದ ಮತ್ತೊಂದು ವಿಚಾರವನ್ನು ಹೇಳದಿರುವಂತಿಲ್ಲ. ಅದೇ ದೇಶಪ್ರೇಮ ಮತ್ತು ಸಾಮಾಜಿಕ ಪ್ರಜ್ಞೆ, ಎಂದರೆ ಸಮಷ್ಟಿ ಜೀವನವನ್ನು ಕುರಿತಾದ ಕಾಳಜಿ. ತಾನು – ತನ್ನದು ಎಂಬ ಸಂಕುಚಿತ ವಲಯದಲ್ಲೇ ಸ್ವಾರ್ಥದ ಕ್ರಿಮಿಯಾಗಿ ಸಾಯುವುದರ ಬದಲು, ಸರ್ವರ ಹಿತಚಿಂತನೆ ಮಾಡಲು ಸಮರ್ಥನಾದಾಗ ಮಾತ್ರ ಒಬ್ಬ ವ್ಯಕ್ತಿ ಪ್ರಬುದ್ಧನಾಗಿ ಅರಳುತ್ತಾನೆ; ಜೀವನದಲ್ಲಿ ಧನ್ಯತೆಯನ್ನು ಅನುಭವಿಸುತ್ತಾನೆ. ಈ ಸಾಮಾಜಿಕ ಪ್ರಜ್ಞೆಯನ್ನು ಎಳೆಯರಲ್ಲಿ ಎಳವೆಯಿಂದ ಬೆಳೆಸುವುದೇ ಒಳ್ಳೆಯದಲ್ಲವೆ!

ಇನ್ನು ದೇಶಪ್ರೇಮ ಎಂದರೇನೆಂಬುದು ಎಲ್ಲರಿಗೂ ತಿಳಿದಿದೆ ಅಥವಾ 'ತಿಳಿದಿದ್ದೇವೆ' ಎಂದು ಜನ ಭ್ರಮಿಸಿದ್ದಾರೆ. ಏಕೆಂದರೆ ಜನರ ಚಟುವಟಿಕೆಗಳನ್ನು ನೋಡಿದರೆ ಅವರಲ್ಲಿ ದೇಶಪ್ರೇಮವಿದೆಯೋ ಇಲ್ಲವೋ, ಸ್ವಾರ್ಥಪ್ರೇಮವಂತೂ ತುಂಬಿಕೊಂಡಿರುವುದು ಕಣ್ಣುಕುಕ್ಕುತ್ತದೆ. ಅಪರೂಪಕ್ಕೆ ಅಲ್ಲೊಬ್ಬರು ಇಲ್ಲೊಬ್ಬರು ಯಥಾರ್ಥ ದೇಶಭಕ್ತರಿದ್ದಾರೆ, ಸುತರಾಂ ಇಲ್ಲವೆಂದಲ್ಲ. ಆದರೆ ಅವರು ಬೆರಳೆಣಿಕೆಯಷ್ಟೇ ಜನ ! ಆದ್ದರಿಂದ, ದೇಶಪ್ರೇಮದ ಬಗ್ಗೆ ಜನರ ಕಲ್ಪನಾವಿನ್ಯಾಸಗಳೇನೇ ಇರಲಿ, ಅವರು ಸ್ವಾಮಿ ವಿವೇಕಾನಂದರ ವಾಣಿಗೆ ಕಿವಿಗೊಟ್ಟರೆ ರಾಷ್ಟ್ರದಲ್ಲಿ